**ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ ನ್ಯಾಯಾಲಯ, ಮದ್ದೂರು**

**<u>ಸಿಸಿ 1910/2022</u>**

| | | | |
|---|---|---|---|
| **ಸಾಕ್ಷಿದಾರರ ಹೆಸರು** | - | ಪೂರ್ಣಿಮ ಸಿ | **ಚಾ.ಸಾ.-4** |
| **ಗಂಡನ ಹೆಸರು** | - | ಲೇಟ್ ಗೋಪಿ ಟಿ | **ಫ್ರಾ.ಸಾ.-2** |
| **ವಯಸ್ಸು** | - | 40 ವರ್ಷ | |
| **ಉದ್ಯೋಗ** | - | ಎಸ್ ಡಿ ಎ | |
| **ವಾಸ ಸ್ಥಳ** | - | ಮದ್ದೂರು | |

ದಿನಾಂಕಃ 25.10.2024 ರಂದು ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ಅಭಿಯೋಜನೆಯ ಪರಃ ಎ ಪಿ ಪಿ ರವರಿಂದಃ</u>**

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ, ಸದರೀ ದಾಖಲೆ ದಿನಾಂಕಃ 07.08.2021 ರಂದು ಜರುಗಿಸಲಾದ ಮಹಜರ್ ಆಗಿದ್ದು, ಅದನ್ನು ನಿ.ಪಿ. 3 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ. 3 ಎ ಎಂದು ಗುರುತಿಸಲಾಯಿತು. ಸದರೀ ದಾಖಲೆಗೆ ದಿನಾಂಕಃ 07.08.2021 ರಂದು ಪಾಂಡವಪುರ ಟೌನಿನ ಮಹಾತ್ಮ ಗಾಂದಿ ನಗರದಲ್ಲಿ ಸಹಿ ಮಾಡಿರುತ್ತೇನೆ. ನಿ.ಪಿ. 3 ದಾಖಲೆಗೆ ನನ್ನನ್ನು ಹೊರತುಪಡಿಸಿ, ನನ್ನ ಸಹೋದ್ಯೋಗಿ ಚಾ.ಸಾ. 5 ರವರೂ ಸಹ ಸಹಿ ಮಾಡಿರುತ್ತಾರೆ. ಸದರೀ ಮಹಜರ್ ನ್ನು ಮಧ್ಯಾಹ್ನ 01.30 ರಿಂದ 03.00 ಗಂಟೆಯವರೆಗೆ ಜರುಗಿಸಿರುತ್ತಾರೆ.

**<u>ಪಾಟೀ ಸವಾಲು ಆರೋಪಿ ಪರ ವಕೀಲರುಃ ಶ್ರೀ ವೈ ಎಂ ಎಂ ರವರಿಂದ</u>**

ಸದರೀ ದಿನ ನಾನು, ಮದ್ದೂರು ತಾಲ್ಲೂಕು ಕಛೇರಿಯಿಂದ 12 ವರೆ ಗಂಟೆಗೆ ಹೊರಟು, 01.30 ಗಂಟೆಗೆ ನಾವು ಪಾಂಡವಪುರಕ್ಕೆ ಹೋಗಿರುತ್ತೇವೆ. ನೀವು ಸದರೀ ದಿನ ಪಾಂಡವಪುರಕ್ಕೆ ಹೋಗಲು, ತಹಸೀಲ್ದಾರ್ ರವರಿಂದ ಅನುಮತಿಯನ್ನು ಪಡೆದಿದ್ದೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರೀ ದಿನ ನೀವು ನಿಮ್ಮ ಕಛೇರಿಯಲ್ಲಿನ ಚಲವಲನ ಪುಸ್ತಕದಲ್ಲಿ ನಮೂದು ಮಾಡಿ, ನಂತರ ಪಾಂಡವಪುರಕ್ಕೆ ಹೋಗಿದ್ದೀರಾ ಎಂದರೆ ಸಾಕ್ಷಿ ಇಲ್ಲಾ ಎಂದು ನುಡಿಯುತ್ತಾರೆ. ನೀವು ಎಲ್ಲೇ ಹೋಗಬೇಕಾದರೂ ಚಲನವಲನ

ಪುಸ್ತಕದಲ್ಲಿ ನಮೂದು ಮಾಡಿ ನಂತರ ಹೋಗಬೇಕೆಂದರೆ ಸರಿ. ಪೋಲೀಸರು ನನಗೆ ಮಹಜರ್ ಕ್ರಮ ಜರುಗಿಸಲು ಬರುವಂತೆ ಲಿಖಿತವಾಗಿ ಯಾವುದೇ ನೋಟೀಸ್ ನೀಡಿಲ್ಲ. ಸದರೀ ದಿನ ಪಾಂಡವಪುರಕ್ಕೆ ಹೋಗಿರುತ್ತೇನೆಂದು, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಮಧ್ಯಾಹ್ನ 01.30 ರಿಂದ 03.030 ಗಂಟೆಯ ತನಕ ಮಹಜರ್ ಕ್ರಮ ಜರುಗಿಸಿರುತ್ತಾರೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಪಾಂಡವಪುರದ ಮಹಾತ್ಮ ಗಾಂಧಿ ರಸ್ತೆಯ ಎರಡು ಅಂತಿಸ್ತಿನ ಕಟ್ಟಡದಲ್ಲಿ ಮಹಜರ್ ಕ್ರಮವನ್ನು ಜರುಗಿಸಿರುತ್ತಾರೆ. ನೀವು ಒಂದು ವೇಳೆ ಸದರೀ ಸ್ಥಳಕ್ಕೆ ಹೋಗಿದ್ದರೆ, ಆ ಸ್ಥಳದ ವಿಳಾಸ ನಿಮಗೆ ಗೊತ್ತಾಗುತ್ತಿತ್ತು ಎಂದರೆ ಸರಿಯಲ್ಲ. ನೀವು ಪೋಲೀಸರ ಮಾತು ಕೇಳಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ, ಚಾ,ಸಾ. 5 ರವರು ನಿಮ್ಮ ಸಹೋದ್ಯೋಗಿ ಎಂದರೆ ಸರಿ. ಸದರೀ ದಿನ ಚಾ.ಸಾ, 5 ರವರೂ ಕೂಡ ನಿಮ್ಮ ಜೊತೆ ಬಂದಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ )-

ಓ ಹೇ ಕೇ ಸರಿಯಾಗಿದೆಯೆಂದು ಒಪ್ಪಿರುತ್ತಾರೆ.

2 ನೇ ಅಪರ ಸಿವಿಲ್ ನ್ಯಾಯಾಧೀಶರು

ಸಾಕ್ಷಿ ಸಹಿ                ಮತ್ತು ಜೆ ಎಂ ಎಫ್ ಸಿ , ಮದ್ದೂರು.